ಶ್ರೀ ಕೆ. ಜೆ. ಜಾರ್ಜ್.— ಈಗಿರತಕ್ಕ ಪದ್ಧತಿಯ ಪ್ರಕಾರ ಪಾಸ್‌ಗಳ ದುರುಪಯೋಗ ಜಾಸ್ತಿ ಆಗುತ್ತಿದೆಯೆಂದು ನನ್ನ ಗಮನಕ್ಕೆ ಬಂದಿದೆ. ಶಾಲಾ ಕಾಲೇಜುಗಳ ಪ್ರಿನ್ಸಿಪಾಲರು ಸಹಿ ಮಾಡಿ ಕಳಿಸುತ್ತಾರೆ, ನಮ್ಮ ಕೌಂಟರಿನಲ್ಲಿ ಪಾಸ್ ಕೊಡುತ್ತಾರೆ. ಆದ್ದರಿಂದಲೇ ನಾವು ಈಗ ಜಾರಿಯಲ್ಲಿ ತರಬೇಕಾಗಿರುವ ಪದ್ಧತಿ ಏನೆಂದರೆ, ಆ ಶಾಲೆಯಲ್ಲಿ ಎಷ್ಟು ವಿದ್ಯಾರ್ಥಿಗಳಿರುತ್ತಾರೆ ಅವರ ಜವಾಬ್ದಾರಿಯನ್ನು ಆ ಪ್ರಿನ್ಸಿಪಾಲರು ತಗೆದುಕೊಳ್ಳುತ್ತಾರೆ. ಆದುದರಿಂದ ಪಾಸ್‌ಗಳ ದುರುಪಯೋಗ ಕಡಿಮೆಯಾಗಬಹುದು.

ಶ್ರೀ ಹೆಚ್. ಎಂ. ರೇವಣ್ಣ.— ಸರ್ಕಾರಿ ಬಸ್ಸುಗಳಲ್ಲಿ ವಿದ್ಯಾರ್ಥಿಗಳಿಗೆ ಪಾಸನ್ನು ಕೊಡುತ್ತಿದ್ದಾರೆ. ಆದರೆ ನಾನು ಬೆಂಗಳೂರು ಗ್ರಾಮಾಂತರ ಪ್ರದೇಶದಿಂದ ಬಂದಿರುವುದರಿಂದ ಒಂದು ಮಾತನ್ನು ಇಲ್ಲಿ ಹೇಳಬಯಸುತ್ತಿದ್ದೇನೆ. ಅನೇಕ ವಿದ್ಯಾರ್ಥಿಗಳು ಸುಮಾರು ೪೦–೫೦ ಕಿಲೋಮೀಟರ್ ದೂರದಲ್ಲಿರುವ ಹಳ್ಳಿಗಳಿಂದ ಪಟ್ಟಣಕ್ಕೆ ಬರುತ್ತಿದ್ದಾರೆ. ಅಲ್ಲಿ ಖಾಸಗಿ ಬಸ್ಸುಗಳು ಓಡಾಡುತ್ತಿರುವುದರಿಂದ ಖಾಸಗಿ ಬಸ್‌ಗಳವರು ಪಾಸ್‌ಗಳನ್ನು ಕೊಡುತ್ತಾ ಇಲ್ಲ. ಆದ್ದರಿಂದ ಮಾನ್ಯ ಸಚಿವರು ಸಾರಿಗೆ ಕಮಿಷನರಿಗೆ ಅಥವಾ ಸಂಬಂಧಪಟ್ಟ ಡಿ.ಸಿ.ಯವರಿಗೆ ತಿಳಿಸಿ ಗ್ರಾಮಾಂತರ ಪ್ರದೇಶದಿಂದ ಬರತಕ್ಕಂಥ ವಿದ್ಯಾರ್ಥಿಗಳಿಗೆ ಖಾಸಗಿ ಬಸ್‌ಗಳಲ್ಲೂ ಕೂಡ ಈ ಒಂದು ಫೆಸಿಲಿಟಿ ಮಾಡಿಕೊಡಬೇಕೆಂದು ಈ ಸಭೆಯ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ಈಗ ಖಾಸಗಿ ಬಸ್‌ನವರು ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಪಾಸುಗಳನ್ನು ಕೊಡುವುದಕ್ಕೆ ಯಾವುದೇ ನಿರ್ಬಂಧ ಇರುವುದಿಲ್ಲ. ಈ ವಿಚಾರವನ್ನು ಸನ್ಮಾನ್ಯ ಸದಸ್ಯರಾದ ರೇವಣ್ಣನವರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ವಿಚಾರದಲ್ಲಿ ನಾವು ಅವರೊಡನೆ ಚರ್ಚೆ ಮಾಡಬೇಕಾಗಿದೆ. ಚರ್ಚೆ ಮಾಡುವುದಕ್ಕೆ ನಾನು ಆದೇಶವನ್ನು ನಮ್ಮ ಅಧಿಕಾರಿಗಳಿಗೆ ಕೊಡುತ್ತೇನೆ. ಈಗ ಕೆ.ಎಸ್.ಆರ್ ಟಿ.ಸಿ ಗೆ ಇನ್ನೊಂದು ತೊಂದರೆ ಏನಾಗಿದೆ ಎಂದರೆ, ಖಾಸಗಿಯವರು ಯಾವಾಗ ರಿಯಾಯಿತಿ ದರದಲ್ಲಿ ಬಸ್ ಪಾಸ್ ಕೊಡುವುದಿಲ್ಲ ಆಗ ಎಲ್ಲ ಕಡೆಯ ಶಾಸಕರಿಂದಲೂ ಮತ್ತು ಸಾರ್ವಜನಿಕವಾಗಿಯೂ ಬೇಡಿಕೆ ಏನು ಬರುತ್ತದೆ ಅಂದರೆ ಶಾಲೆಗಳಿಗೆ ಇರುವ ಕಡೆ ಕೆ.ಎಸ್.ಆರ್ ಟಿ.ಸಿ. ಬಸ್‌ಗಳನ್ನು ಓಡಿಸಿ ಎಂದು. ಬರೀ ಶಾಲಾ ಕಾಲೇಜಿನ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗುವುದಕ್ಕೋಸ್ಕರವಾಗಿ ಮಾತ್ರ ಕೆ. ಎಸ್..ಆರ್. ಟಿ. ಸಿ ಬಸ್‌ಗಳನ್ನು ಓಡಿಸಬೇಕೆಂದರೆ ನಮಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ನಾನು ನಮ್ಮ ಅಧಿಕಾರಿಗಳಿಗೆ ಆದೇಶ ಕೊಡುತ್ತೇನೆ. ಅವರೊಡನೆ ಚರ್ಚೆಮಾಡಿ ಯಾವ ತೀರ್ಮಾನವನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ ಎಂದು ಆಶ್ವಾಸನೆ ಕೊಡುತ್ತೇನೆ.

ಶಿಷ್ಟಾಚಾರ ನಿಯಮದ ವೇರೆಗೆ

೧) ವಿಜಾಪುರ ಜಿಲ್ಲೆಯ ಜಮಖಂಡಿ ತಾಲ್ಲೂಕಿನಲ್ಲಿ ಭಾರಿ ಮಳೆಯಿಂದ ನಷ್ಟವುಂಟಾಗಿರುವುದರಿಂದ ಪರಿಹಾರಕ್ಕಾಗಿ ಒತ್ತಾಯಂ.

ಶ್ರೀ ಬಿ. ಜೆ. ಯಳ್ಳಿಗುತ್ತಿ (ಬೀಳ್ಗಿ).–ಮಾನ್ಯ ಸಭಾಧ್ಯಕ್ಷಣಿಯವರೆ, ವಿಜಾಪುರ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಸಾವಳಗಿ ಮಂಡಳ ವ್ಯಾಪ್ತಿಯಲ್ಲಿ ಬರುವ ಬಾಬಿ ಬೀಳಗಿ ಗ್ರಾಮದ ಎರಡು ಕೆರೆಗಳು ದಿನಾಂಕ ೨೬–೫–೮೮ರಂದು ಭಾರೀ ಮಳೆಯಿಂದಾಗಿ ತುಂಬಿ ಹರಿದು, ಕೆರೆಯು ಒಡೆದ ಪರಿಣಾಮವಾಗಿ ಕುರಗೋಡ ಹಾಗೂ ಸಾವಳಗಿ ಗ್ರಾಮದ ಜನರ ಆಸ್ತಿಗಳಿಗೆ ಬಹಳಷ್ಟು ನಷ್ಟ ಉಂಟಾಗಿರುವ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ. ಈ ಕೂಡಲೇ ಸರ್ಕಾರದವರು ಈ ಗಂಭೀರ ವಿಷಯದ ಬಗ್ಗೆ ಸೂಕ್ತ ರೀತಿಯ ರಿಪೇರಿ ಮಾಡುವ ಕ್ರಮ ಕೈಗೊಳ್ಳಲು ನಾನು ತಮ್ಮ ಮುಖಾಂತರ ಮಾನ್ಯ ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಮತ್ತು ಬಾವಿ ಪಂಪುಸೆಟ್ಟು ಮುಳುಗಿದ ಜನರಿಗೆ ಪರಿಹಾರ ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಗಣಿ ಮತ್ತು ಭೂವಿಜ್ಞಾನ ಸಚಿವರು) —ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ಈ ವಿಚಾರವನ್ನು ತಂದು ಉತ್ತರ ಒದಗಿಸುತ್ತೇನೆ.